**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 510/2024</u>**

**ಪ್ರಾಸಾಃ- 6 ಚಾಸಾಃ- 13**

| | | |
|---|---|---|
| ಸಾಕ್ಷಿಯ ಹೆಸರು | : | ಜಿ.ಯುಗೇಂದ್ರ |
| ತಂದೆಯ ಹೆಸರು | : | ಲೇಟ್ ಆಂಜನೇಯುಲು |
| ವಯಸ್ಸು | : | 52 ವರ್ಷ |
| ವೃತ್ತಿ | : | ಕ್ಯಾಜುವಲಿಟಿ ಮೆಡಿಕಲ್ ಆಫೀಸರ್, ವಿಮ್ಸ್ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 25.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 2006 ರಿಂದ ಇಲ್ಲಿಯವರೆಗೆ ವಿಮ್ಸ್ ಆಸ್ಪತ್ರೆ, ಬಳಾರಿಯಲ್ಲಿ ಕ್ಯಾಜುವಲಿಟಿ ಮೆಡಿಕಲ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 10-7-2023 ರಂದು ಮದ್ಯಾಹ್ನ 3-15 ಗಂಟೆ ಸಮಯದಲ್ಲಿ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಚಾಸಾ 4 ಮತ್ತು 5 ರವರು ನನ್ನ ಬಳಿ ಚಿಕಿತ್ಸೆಗೆ ಬಂದಿದ್ದರು. ನಾನು ಅವರುಗಳನ್ನು ಪರೀಕ್ಷೆ ಮಾಡಿ ನೋಡಿದಾಗ ಅವರುಗಳಿಗೆ ಮೆಲ್ನೋಟಕ್ಕೆ ಯಾವುದೇ ಗಾಯಗಳು ಆಗಿಲ್ಲದೇ ಇರುವುದು ಕಂಡು ಬಂದಿತ್ತು. ತಲೆಯಲ್ಲಿ ನೋವು ಇದ್ದ ಬಗ್ಗೆ ಅವರು ತಿಳಿಸಿದ್ದರು. ಅವರುಗಳ ಬ್ರೆಯಿನ್‌ನ ಸಿಟಿ ಸ್ಕ್ಯಾನ್ ಮಾಡಿಸಲಾಗಿತ್ತು. ನನ್ನ ಪ್ರಕಾರ ಅವರುಗಳಿಗೆ ಸಾದಾ ಸ್ವರೂಪದ ಗಾಯಗಳು ಆಗಿದ್ದವು. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಗಾಯಾಳುಗಳ ಗಾಯ ಪ್ರಮಾಣ ಪತ್ರಗಳನ್ನು ನೀಡಿದ್ದೆ. ಚಾಸಾ 4 ರವ ಗಾಯ ಪ್ರಮಾಣ ಪತ್ರವನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಚಾಸಾ 5 ರವರ ಗಾಯ ಪ್ರಮಾಣ ಪತ್ರವನ್ನು ನಿಪಿ-7 ಎಂದು ಹಾಗುೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಜಿ ವಿ ವಕೀಲರಿಂದ:</u>**

ನಾನು ಗಾಯಾಳುಗಳಿಗೆ ಚಿಕಿತ್ಸೆ ಮಾಡುವುದಕ್ಕಿಂತ ಮುಂಚೆ ಎಂ ಎಲ್ ಸಿ ದಾಖಲು ಮಾಡಿಕೊಂಡಿದ್ದೆ. ನನ್ನ ಪ್ರಕಾರ ಚಾಸಾ 4 ಮತ್ತು 5 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ. ಗಾಯಾಳುಗಳು ಹೇಳಿದ ಆಧಾರದ ಮೇಲೆ ನಾನು ಅವರಿಗೆ ತಲೆನೋವು ಇತ್ತು ಎಂದು ನಿಪಿ-6 ಮತ್ತು 7 ರಲ್ಲಿ ಹೇಳಿದ್ದೇನೆ. ಬಿ ಪಿ ಜಾಸ್ತಿಯಾದಲ್ಲಿ ಅಥವಾ ಸರಿಯಾದ ಸಮಯದಲ್ಲಿ ಊಟ ಮಾಡದೇ ಇದ್ದಲ್ಲಿ ಮತ್ತು ಇತರೇ ಅನೇಕ ಕಾರಣಗಳಿಂದಾಗಿ ತಲೆನೋವು ಬರುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 4 ಮತ್ತು 5 ರವರಿಗೆ ಯಾವುದೇ ತರಹದ ಗಾಯಗಳು ಆಗಿಲ್ಲದೇ ಇದ್ದರೂ ಸಹ ನಾನು ನಿಪಿ-6 ಮತ್ತು 7 ರಲ್ಲಿ ಗಾಯಾಳುಗಳಿಗೆ ಸಾದಾ ಸ್ವರೂಪದ ಗಾಯಗಳು ಆಗಿವೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರ ಮಾತನ್ನು ಕೇಳಿಕೊಂಡು ನಾನು ನಿಪಿ-6 ಮತ್ತು 7 ರಂತೆ ಸುಳ್ಳು ಗಾಯ ಪ್ರಮಾಣ ಪತ್ರಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ನನ್ನ ಬಳಿ ಯಾವತ್ತೂ ಚಿಕಿತ್ಸೆಗೆ ಬಂದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 510/2024**

**ಪ್ರಾಸಾಃ- 7 ಚಾಸಾಃ- 6**

| | | |
|---|---|---|
| ಸಾಕ್ಷಿಯ ಹೆಸರು | : | ಡೇವಿಡ್ ರಾಜ್ |
| ತಂದೆಯ ಹೆಸರು | : | ಸಂಪತ್ ನಾಯಕ್ |
| ವಯಸ್ಸು | : | 14 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 25.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ನನಗೆ ತಾಯಿಯಾಗಬೇಕು. ಚಾಸಾ 4 ನನ್ನ ಅಜ್ಜಿ, ಚಾಸಾ 5 ನನ್ನ ದೊಡ್ಡಮ್ಮನಾಗಬೇಕು. ಚಾಸಾ 7 ರಿಂದ 9 ರವರ ಪರಿಚಯ ಇದೆ. ನಾವು ಲಂಬಾಣಿ ಜನಾಂಗಕ್ಕೆ ಸೇರಿದ್ದೇವೆ. ಆರೋಪಿತರ ಪರಿಚಯ ಇದೆ. ದಿಃ 8-7-2023 ರಂದು ಮದ್ಯಾಹ್ನ 12-30 ರ ಸಮಯದಲ್ಲಿ ನಾನು ಶಾಲೆ ಮುಗಿಸಿ ಮನೆಗೆ ಬಂದಿದ್ದೆ. ಮದ್ಯಾಹ್ನ ಸುಮಾರು 2-30 ರಿಂದ 3-00 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಕಾಂಪೌಂಡ್ ಬಳಿ ಬಂದು ಚಾಸಾ 4 ಮತ್ತು 5 ರವರ ಜೊತೆ ಜಗಳ ಆಡುತ್ತಿದ್ದರು. ಆರೋಪಿತರು ಚಾಸಾ 4 ಮತ್ತು 5 ರವರಿಗೆ ಲಂಬಾಣಿ ಜಾತಿಗೆ ಸೇರಿದ ಕಂತ್ರಿ ಸೂಳೇರೇ ಎಂದು ಬೈದು ಜಾತಿನಿಂದನೆ ಮಾಡಿದ್ದರು. ಆರೋಪಿತರು ಚಾಸಾ 4 ಮತ್ತು 5 ರವರನ್ನು ದಬ್ಬಾಡಿದ್ದರು. ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಪ್ರಾಣ ತೆಗೆಯುವುದಾಗಿ ಆರೋಪಿತರು ಬೆದರಿಕೆ ಹಾಕಿದ್ದರು. ನಾನು ಘಟನೆಯ ಬಗ್ಗೆ ನನ್ನ ತಾಯಿ ಚಾಸಾ 1 ರವರಿಗೆ ಪೋನ್ ಮಾಡಿ ವಿಷಯ ತಿಳಿಸಿದ್ದೆ. ಚಾಸಾ 7 ಮತ್ತು 8 ರವರು ಜಗಳ ನೋಡಿ ಬಿಡಿಸಿದ್ದರು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಜಗಳವು ಕಾಂಪೌಂಡ್ ಗೋಡೆಯ ಬಗ್ಗೆ ಇದ್ದ ಸಿವಿಲ್ ಕೇಸು ಸಂಬಂಧ ಆಗಿತ್ತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ವಕೀಲರಿಂದಃ**

ಈ ದಿವಸ ನ್ಯಾಯಾಲಯಕ್ಕೆ ನಾನು, ಚಾಸಾ 1 ಮತ್ತು 7 ರವರು ಸೇರಿ ಬಂದಿದ್ದೇವೆ ಎಂದರೆ ಸರಿ. ಚಾಸಾ 7 ರವರು ನನ್ನ ತಾಯಿಗೆ ತುಂಬಾ ಪರಿಚಯಸ್ಥರು ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಈ ದಿವಸ ನನ್ನನ್ನು ಮತ್ತು ಚಾಸಾ 7 ರವರನ್ನು ನ್ಯಾಯಾಲಯಕ್ಕೆ ಬರಬೇಕು ಎಂದು ಹೇಳಿ ಚಾಸಾ 1 ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನಿನ್ನ ತಾಯಿ ಈ ದಿವಸ ಈ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿದ್ದರು ಎಂದರೆ ಸರಿ. ನಾನು ನನ್ನ ಪೋಲೀಸರ ಮುಂದಿನ ಹೇಳಿಕೆಯಲ್ಲಿ ಚಾಸಾ 7 ಮತ್ತು 8 ರವರು ಘಟನೆ ಸ್ಥಳದಲ್ಲಿ ಇದ್ದರು ಎಂದು ಮತ್ತು ಜಗಳ ಬಿಡಿಸಿದ್ದರು ಎಂದು ಹೇಳಿದ್ದೇನೆ.

ನಾನು ನಂದಿ ಇಂಟರ್ ನ್ಯಾಷನಲ್ ಶಾಲೆಗೆ ಹೋಗುತ್ತೇನೆ. ನನ್ನ ಶಾಲೆಯ ಅವಧಿ ಸೋಮವಾರದಿಂದ ಶುಕ್ರವಾರದವರೆಗೆ ಮುಂಜಾನೆ 8-30 ರಿಂದ 3-30 ರವರೆಗೆ ಇರುತ್ತದೆ. ಶನಿವಾರದಂದು ಮುಂಜಾನೆ 8-30 ರಿಂದ 12-30 ರವರೆಗೆ ಇರುತ್ತದೆ. ನನ್ನ ತಾಯಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ. ಘಟನೆಯಾದ ಸಮಯದಲ್ಲಿ ನನ್ನ ತಾಯಿ ವಾಸವಿ ಕಾಲೇಜ್‌ನಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಕಾಲೇಜಿಗೆ ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಶನಿವಾರ ಎಲ್ಲಾ ಶಾಲಾ ಕಾಲೇಜುಗಳು ಮುಂಜಾನೆ ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಶನಿವಾರದಂದು ಮುಂಜಾನೆ ಶಾಲೆ ಮುಗಿಸಿಕೊಂಡು ಮನೆಗೆ ಬರುವ ರೀತಿಯಲ್ಲಿ ನನ ತಾಯಿ ಸಹ ಕಾಲೇಜು ಕೆಲಸ ಮುಗಿಸಿಕೊಂಡು ಮನೆಗೆ ಮುಂಜಾನೆ ಬರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿಯ ಕೆಲಸದ ಸಮಯ ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಕಾಲೇಜುಗಳಲ್ಲಿ ಸಾಮಾನ್ಯವಾಗಿ ಮುಂಜಾನೆ ಮಾತ್ರ ಲೆಕ್ಚರರ್ ಗಳ ಕೆಲಸ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಇದ್ದ ಕೀಪ್ಯಾಡ್ ಪೋನ್ ಮೂಲಕ ನನ್ನ ತಾಯಿಗೆ ವಿಷಯ ತಿಳಿಸಿದ್ದೆ. ಸದರಿ ಪೋನ್ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಲಾಗಿತ್ತು. ಅದನ್ನು ನಾನು ಮನೆಯಲ್ಲಿ ಹೆಚ್ಚಾಗಿ ಉಪಯೋಗಿಸುತ್ತೇನೆ. ಅದು ಐಟೆಲ್ ಕಂಪನಿಯ ಪೋನ್ ಆಗಿತ್ತು. ಅದರಲ್ಲಿ ಏರ್ ಟೆಲ್ ಕಂಪನಿಯ ಸಿಮ್ ನಂಬರ್ 7259109104 ಇತ್ತು. ನನ್ನ ತಾಯಿಯ ಮೊಬೈಲ್ ನಂಃ 9986730327 ಆಗಿದೆ. ಪೋಲೀಸರಿಗೆ ನಾನು ಪೋನ್ ಮಾಡಿದ ಮೊಬೈಲ್ ನಂಬರ್ ನ್ನು ಮತ್ತು ನನ್ನ

ತಾಯಿಯ ಮೊಬೈಲ್ ನಂಬರ್ ನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಪೋಲೀಸರು ತನಿಖೆ ಸಮಯದಲ್ಲಿ ಮನೆಯಲ್ಲಿದ್ದ ಐಟೆಲ್ ಕಂಪನಿಯ ಮೊಬೈಲ್ ನ್ನು ಜಪ್ತು ಮಾಡಿಕೊಂಡಿಲ್ಲ. ಜಗಳ ಆದಾಗ ನಾನು, ಚಾಸಾ 4, 5, 7, 8 ಮತ್ತು ಆರೋಪಿತರು ಇದ್ದೆವು. 1 ನೇ ಆರೋಪಿಯು ಚಾಸಾ 4 ರವರಿಗೆ ಲಂಬಾಣಿ ಸೂಳೆ ಎಂದು ಬೈದಿದ್ದ. ಯಾರು ಯಾರನ್ನು ಘಟನೆಯ ಸಮಯದಲ್ಲಿ ದಬ್ಬಿದ್ದರು ಎಂದು ನೆನಪಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 4 ಮತ್ತು 5 ರವರಿಗೆ ನಾನು ಹೇಳಿದಂತೆ ಹೊಡೆದಿಲ್ಲ, ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯುಲ್ಲ. ನಾನು ನನ್ನ ತಾಯಿಗೆ ಯಾವುದೇ ವಿಷಯ ತಿಳಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ಯಾವುದೇ ಕೀಪ್ಯಾಡ್ ಪೋನ್ ಇರಲಿಲ್ಲ ಎಂದರೆ ಸರಿಯುಲ್ಲ. 1 ನೇ ಆರೋಪಿ ಜಾಗೆಯನ್ನು ತೆಗೆದುಕೊಂಡಿದ್ದರ ವಿಷಯವಾಗಿ ನನ್ನ ತಾಯಿಗೆ ಆರೋಪಿತರ ಮೇಲೆ ಸಿಟ್ಟು ಇತ್ತು ಎಂದರೆ ಸರಿಯುಲ್ಲ. ಸದರಿ ಜಾಗೆಯನ್ನು ನನ್ನ ತಾಯಿ ತೆಗೆದುಕೊಳ್ಳುವ ಇಚ್ಚೆ ಹೊಂದಿದ್ದಳು ಎಂದರೆ ಸರಿಯುಲ್ಲ. ಸಾಕ್ಷಿಯು ನನ್ನ ತಾಯಿ 1 ನೇ ಆರೋಪಿಗೆ ಜಾಗೆ ಕೊಡಿಸಿರುತ್ತಾಳೆ ಎಂದು ಹೇಳಿರುತ್ತಾರೆ. ಆರೋಪಿತರು ನನ್ನ ತಾಯಿಯ ಬಳಿ ಬಂದು ಜಾಗೆಯ ಮಾಲೀಕರು ನನ್ನ ತಾಯಿಗೆ ಪರಿಚಯ ಇರುವುದರಿಂದ ಅದನ್ನು ನಮಗೆ ಕೊಡಿಸಬೇಕೆಂದು ಕೇಳಿದ್ದರು. ಆಗ ನನ್ನ ತಾಯಿ ಆರೋಪಿತರಿಗೆ ಜಾಗೆಯನ್ನು ಕೊಡಿಸಿದ್ದರು. ಆರೋಪಿತರು ಕಾಂಪೌಂಡ್ ವಿಷಯವಾಗಿ ತೊಂದರೆ ಕೊಡುತ್ತಿದ್ದರಿಂದ ನನ್ನ ತಾಯಿ ಆರೋಪಿತರಿಗೆ ರೂ. 5 ಲಕ್ಷ ಹೆಚ್ಚಿಗೆ ಹಣ ಕೊಡವುದಾಗಿ ಹೇಳಿ ಜಾಗೆಯನ್ನು ತನಗೆ ಕೊಡಬೇಕು ಎಂದು ಕೇಳಿದ್ದರು. ಆಗ ಆರೋಪಿತರು ತಮಗೆ ನಮ್ಮ ಜಾಗೆಯನ್ನು ಅವರಿಗೆ ಮಾರುವಂತೆ ಕೇಳಿದ್ದರು. ಆರೋಪಿತರು ನಮಗೆ ಜಾಗೆ ಮಾರಲು ಒಪ್ಪದೇ ಇದ್ದ ಕಾರಣ ಆರೋಪಿತರ ವಿರುದ್ದ ನನ್ನ ತಾಯಿಗೆ ಸಿಟ್ಟು ಇತ್ತು ಎಂದರೆ ಸರಿಯಲ್ಲ. ಆರೋಪಿತರು ಹಾಗೂ ನನ್ನ ತಾಯಿಯ ನಡುವೆ ಜಾಗೆಯ ವಿಚಾರವಾಗಿ ಮನಸ್ತಾಪ ಇರುವುದರಿಂದ ನಾನು ನನ್ನ ತಾಯಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ನಮ್ಮ ಜಾಗೆಯ ತಂಟೆಗೆ ಬಂದಿಲ್ಲ ಮತ್ತು

ಕಾಂಪೌಂಡ್ ಯಾವತ್ತೂ ನಾಶ ಮಾಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಿಃ 8-3-2023 ರಂದು ಮದ್ಯಾಹ್ನ 3-00 ಗಂಟೆಗೆ ಯಾವುದೇ ಜಗಳ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನೀಡಿದ ಸುಳ್ಳು ದೂರಿಗೆ ಪೂರಕವಾಗುವಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**